ಬೆಂಗಳೂರು ಕೆರೆಗಳ ಅಭಿವೃದ್ಧಿಗೆ ಕ್ರಮ: ಸಚಿವ ಪ್ರಕಾಶ್ ಜಾವಡೇಕರ್

Happy New Year 2016

ಡಾ. ಸಿ. ಎನ್. ಮಂಜುನಾಥ್‌ಗೆ ಪ್ರೆಸ್‌ಕ್ಲಬ್ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ

# 'ನಕಾರಾತ್ಮಕ ಮನೋಭಾವ ಸಮಾಜಕ್ಕೆ ಮಾರಕ'

■ ವಿಕ ಸುದ್ದಿಲೋಕ ಬೆಂಗಳೂರು

ನಕಾರಾತ್ಮಕ ಮನೋಭಾವನೆಯು ಭಯೋತ್ಪಾದನೆಗಿಂತಲೂ ಹೆಚ್ಚು ಅಪಾಯಕಾರಿ. ಭಯೋತ್ಪಾದಕರ ದಾಳಿಯಿಂದ ಸಾವು-ನೋವು ಉಂಟಾದರೆ, ನಕಾರಾತ್ಮಕ ಮನೋಭಾವದಿಂದ ಇಡೀ ಸಮಾಜವೇ ನಾಶವಾಗುತ್ತದೆ ಎಂದು ಖ್ಯಾತ ಹೃದ್ರೋಗ ತಜ್ಞ ಮತ್ತು ಜಯದೇವ ಹೃದ್ರೋಗ ಸಂಸ್ಥೆಗಳ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಹೇಳಿದ್ದಾರೆ.

ಬೆಂಗಳೂರು ಪ್ರೆಸ್‌ಕ್ಲಬ್ ತಮಗೆ ನೀಡಿದ 2015ರ 'ವರ್ಷದ ವ್ಯಕ್ತಿ' ಪುರಸ್ಕಾರವನ್ನು ಗುರುವಾರ ಸ್ವೀಕರಿಸಿ ಮಾತನಾಡಿದರು.

''ನಮ್ಮಲ್ಲಿ ಸಾಕಷ್ಟು ಜನ ಆರೋಗ್ಯವೆಂದರೆ ಅದು ದೈಹಿಕವಾದುದಷ್ಟೇ ಎಂದು ತಿಳಿದುಕೊಂಡಿದ್ದಾರೆ. ಇದರ ಜತೆಗೆ ಮಾನಸಿಕ ಮತ್ತು ಸಾಮಾಜಿಕ ಆರೋಗ್ಯ ಕೂಡ ಮುಖ್ಯ. ಆಗ ಮಾತ್ರ ಅದನ್ನು ಪರಿಪೂರ್ಣ ಆರೋಗ್ಯ ಎನ್ನಬಹುದು. ಆದರೆ, ನಮ್ಮ ದೇಶದಲ್ಲಿ ಹಲವು ಕಾರಣಗಳಿಂದಾಗಿ ಚಿಕ್ಕ ವಯಸ್ಸಿನವರಲ್ಲೇ ಹೃದ್ರೋಗ, ಸಕ್ಕರೆ ಕಾಯಿಲೆ, ಕೊಲೆಸ್ಟರಾಲ್, ಬೊಜ್ಜು ಮುಂತಾದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವುದು ಆತಂಕದ ಸಂಗತಿ,'' ಎಂದು ಅವರು ನುಡಿದರು.

''ನಮ್ಮ ಜೀವನಶೈಲಿ ಪ್ರಕೃತಿಗೆ ಹತ್ತಿರವಾಗಿರಬೇಕು. ಅತ್ಯಗತ್ಯವಾಗಿ ಸೂರ್ಯನ ಬೆಳಕು, ಸರಿಯಾದ ಆಹಾರ ಕ್ರಮ, ದೈಹಿಕ ವ್ಯಾಯಾಮ, ತಾಳ್ಮೆ ಮತ್ತು ಆತ್ಮವಿಶ್ವಾಸ ಈ ಐದೂ ಅಂಶಗಳು ನಮ್ಮದಿಯ ಜೀವನಕ್ಕೆ ಬೇಕೇಬೇಕು,'' ಎಂದು ಅವರು ಅಭಿಪ್ರಾಯಪಟ್ಟರು.

''ಹಿಂದೆಲ್ಲ ಮಕ್ಕಳು ತಮ್ಮ ವೃದ್ಧ ತಂದೆ-ತಾಯಿಯರನ್ನು ಚಿಕಿತ್ಸೆಗೆ ಕರೆದುಕೊಂಡು ಬರುತ್ತಿದ್ದರು. ಆದರೆ ಈಗ ತಂದೆ-ತಾಯಿಯರೇ ತಮ್ಮ ಮಧ್ಯವಯಸ್ಕ ಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದಾರೆ. ಜತೆಗೆ ಈಗ ಅನಾರೋಗ್ಯವೆನ್ನುವುದು ಹಳ್ಳಿಗಳಲ್ಲೂ ವ್ಯಾಪಕವಾಗಿದೆ. ಆದರೆ ಹಳ್ಳಿಗಳಲ್ಲಿ ಸೂಕ್ತ ರಕ್ಷಣೆ ಇಲ್ಲದೆ ಇರುವುದರಿಂದ ವೈದ್ಯರು ಅಲ್ಲಿ ಸೇವೆ ಸಲ್ಲಿಸಲು ಹಿಂದೇಟು ಹಾಕುತ್ತಿದ್ದಾರೆ,'' ಎಂದು ಅವರು ಹೇಳಿದರು.

ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪುರಸ್ಕೃತ ಪತ್ರಕರ್ತರನ್ನು ಪ್ರಶಂಸಿಸಿದರು. ಇದೇ ಸಂದರ್ಭದಲ್ಲಿ ಅವರು 2016ನೇ ವರ್ಷದ ಪ್ರೆಸ್ ಕ್ಲಬ್ ಡೈರಿ ಬಿಡುಗಡೆ ಮಾಡಿದರಲ್ಲದೆ, ಕ್ಲಬ್ ಆಯೋಜಿಸಿದ ಅಂತರ ಮಾಧ್ಯಮ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಮಹದೇವಪ್ಪ, ಜಾರ್ಜ್, ರೋಷನ್ ಬೇಗ್, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ವಾರ್ತಾ ಇಲಾಖೆಯ ನಿರ್ದೇಶಕ ವಿಶುಕುಮಾರ್, ಕ್ಲಬ್‌ನ ಅಧ್ಯಕ್ಷ ಆರ್. ಶ್ರೀಧರ್, ಕಾರ್ಯದರ್ಶಿ ಶಿವಪ್ರಸಾದ್ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.





ಬೆಂಗಳೂರು ಪ್ರೆಸ್ ಕ್ಲಬ್ ವತಿಯಿಂದ ಗುರುವಾರ 'ವಿಜಯ ಕರ್ನಾಟಕ' ಸುದ್ದಿ ಸಂಪಾದಕ ವಸಂತ ನಾಡಿಗೇರ ಸೇರಿದಂತೆ ಹಲವು ಪತ್ರಕರ್ತರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಮಾಡಲಾಯಿತು (ಎಡಚಿತ್ರ). 'ವರ್ಷದ ವ್ಯಕ್ತಿ' ಪುರಸ್ಕಾರವನ್ನು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು.

## ಪ್ರಶಸ್ತಿ ಪುರಸ್ಕೃತರು

ಸಮಾರಂಭದಲ್ಲಿ 'ವಿಜಯ ಕರ್ನಾಟಕ'ದ ಸುದ್ದಿ ಸಂಪಾದಕ ವಸಂತ ನಾಡಿಗೇರ ಸೇರಿದಂತೆ ಹಲವು ಪತ್ರಕರ್ತರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪುರಸ್ಕೃತರ ವಿವರ ಹೀಗಿದೆ. ಡಿ.ವಿ.ರಾಜಶೇಖರ, ಎಸ್. ಆರ್.ಆರಾಧ್ಯ, ಬಿ.ಪಿ.ಮಲ್ಲಪ್ಪ, ಶಶಿಧರ ಭಟ್, ಕೆ.ಎಂ.ಶಿವರಾಜ್, ಆರ್.ಟಿ.ವಿಠಲಮೂರ್ತಿ, ರುದ್ರಣ್ಣ ಹರ್ತಿಕೋಟೆ, ವಿ.ನಾಗರಾಜು, ಜಿ.ಎಂ. ಕುಮಾರ್, ಕೇಶವ ವಿಟ್ಲ ಮತ್ತು ಮಹಮದ್ ಅಸಾದ್. ಜತೆಯಲ್ಲಿ 'ವಿಕ' ಸೋದರ ಪತ್ರಿಕೆ 'ಟೈಮ್ಸ್ ಆಫ್ ಇಂಡಿಯಾ'ದ ವಿಶೇಷ ವರದಿಗಾರ್ತಿ ನಹೀದಾ ಅತಾವುಲ್ಲಾ ಮತ್ತು ಕೆ.ಜಿ.ನಾಗಲಕ್ಷ್ಮಿ ಬಾಯಿ ಅವರಿಗೆ 'ಮಾಧ್ಯಮ ಸಾಧಕಿ' ಪುರಸ್ಕಾರವನ್ನು ಕೊಡಲಾಯಿತು. ಅಲ್ಲದೆ,ಮಂಡ್ಯ ಜಿಲ್ಲೆ ಕಿರುಗಾವಲಿನ ಸಾವಯವ ಕೃಷಿ ಸೈಯದ್ ಘನಿ ಖಾನ್ ಅವರಿಗೆ 'ಕೃಷಿ ಸಾಧಕ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಇವರು 800 ಬಗೆಯ ಭತ್ತದ ತಳಿ, 200 ಬಗೆಯ ಮಾವಿನ ತಳಿ ಮತ್ತು 60ಕ್ಕೂ ಹೆಚ್ಚು ಬಗೆಯ ಸಿರಿಧಾನ್ಯ ಸಂಗ್ರಹಣೆ ವಿಕ್ರಮವನ್ನು ಸಾಧಿಸಿದ್ದಾರೆ.

ವಿಜಯ ಕರ್ನಾಟಕ : 01-01-2016 (pg-4)